ನೀನು ಸುಮ್ಮನೆ ಬರ್ತಾಯಿರು' ಎಂದು ಧೈರ್ಯ ತುಂಬಿದಾಗ ಹಿಂಜರಿಕೆಯಿಲ್ಲೇ ಒಪ್ಪಿದೆ.


***

ಮೊದಲ ದಿನ ಹೊಸ ಆಫೀಸಿನಲ್ಲಿ ಹೆಡ್ ಕ್ಲರ್ಕ್ ನನ್ನನ್ನು ಸ್ವಾಗತಿಸಿ ಹಾಜರಾತಿಯಲ್ಲಿ ಹೆಸರು ಬರೆದು ಸಹಿ ಹಾಕಿಸಿಕೊಂಡು, 'ಇಂದ್ರಾಣಿ ಮೇಡಂ, ನಿಮಗೆ ಹೊಸ ಪಾರ್ಟ್ನರ್ ಸಿಕ್ಕರು ನೋಡಿ' ಎಂದು ಸ್ವಲ್ಪ ವಯಸ್ಸಾಗಿದ್ದ ಹೆಂಗಸನ್ನು ಉದ್ದೇಶಿಸಿದರು. ಆಕೆ ನನ್ನತ್ತ ನೋಡಿ ನಸುನಗುತ್ತ 'ಇಲ್ಲಿ ಬನ್ನಿ' ಎಂದರು. ಊಟದ ಸಮಯದಲ್ಲಿ ಇಂದ್ರಾಣಿಯವರು 'ಪಾವನಿ, ನೀವು ಪಿಯುಸಿ ಮಾಡಿದ್ದೀರಿ, ಕ್ಲರ್ಕ್ ಕೆಲಸ, ಅದೂ ಇಲ್ಲದಿದ್ರೆ ಟೇಬಲ್ ಒರೆಸೋದು ಫೈಲ್ ಕೊಡೋದು ಆಗ್ತಿತ್ತು' ಎಂದಾಗ ಪೆಚ್ಚು ನಗೆ ನಕ್ಕೆ.

'ನೀವು ಚುರುಕಿದ್ದೀರಿ, ಇನ್ನೂ ಚಿಕ್ಕ ವಯಸ್ಸು, ಸ್ವಲ್ಪ ಪ್ರಯತ್ನಪಡಿ. ಅಕೌಂಟ್ಸ್ ಸೆಕ್ಷನ್‌ಗೆ ಶಿಫಾರಸ್ಸು ಮಾಡಬಹುದು', ಮುಂದುವರಿಸಿದಾಗ ಏನೂ ಅರ್ಥವಾಗದಂತೆ ಹುಬ್ಬೇರಿಸಿದೆ. 'ನೀವಿರುವ ಊರು ಬಿಟ್ಟು ಬರೋದಕ್ಕೆ ಮನಸ್ಸು ಮಾಡಿದ್ದರಲ್ಲೇ ಗೊತ್ತಾಗುತ್ತೆ, ಬಿ.ಕಾಮ್. ಮಾಡಿ. ನಿಮಗೆ ಅನುಕೂಲವಾದರೆ ಸಂಜೆ ಕಾಲೇಜಿಗೆ ಹೋಗಿ. ಇಲ್ಲದಿದ್ದರೆ ದೂರ ಶಿಕ್ಷಣದಲ್ಲಾದರೂ ಸರಿ, ಉದ್ಯೋಗದಲ್ಲೂ ಮೇಲೇರಬಹುದು... ಅದೇ ನನ್ನ ಕಥೆ ನೋಡಿ, ಕೆಲಸಕ್ಕೆ ಸೇರಿದಾಗಿಲಿನಿಂದ ಇಲ್ಲೇ ಇದ್ದೀನಿ. ಸಂಸಾರ ಕಟ್ಕೊಂಡು ಓದು ಮುಂದುವರೆಸೋಕ್ಕೆ ಆಗ್ಲೇ ಇಲ್ಲ. ನಾನೂ ಅನುಕಂಪದ ಆಧಾರದಲ್ಲಿ ಸೇರಿದ್ದು. ಆಗ ಕೇವಲ ಹತ್ತನೇ ತರಗತಿಗೆ ಈ ಕ್ಲರ್ಕ್ ಪೋಸ್ಟ್. ನಾಲ್ಕೈದು ವರ್ಷದಿಂದ ಪಿಯುಸಿ ಎಂಟ್ರಿ ಲೆವೆಲ್ ಮಾಡಿರೋದು'. 'ಸರಿ ಮೇಡಂ' ಎಂದೆ. ಅವರ ಕಾಳಜಿ ಆಪ್ತವಾಗಿತ್ತು.

***

ಆಫೀಸು ಬಿಡುವ ಸಮಯಕ್ಕೆ ಸರಿಯಾಗಿ ಭಾಗೀರತಿ ನನಗಾಗಿ ಕಾಯುತ್ತಿದ್ದಳು. ಇಬ್ಬರೂ ಸೇರಿ ನಡೆದೇ ಹೋದೆವು. ಇಪ್ಪತ್ತು ನಿಮಿಷದ ನಡಿಗೆ. 'ಬ್ರೋಕರ್ ರಂಗ ಒಂದೆರಡು ಮನೆ ತೋರಿಸ್ತಾನಂತೆ ನೋಡ್ಕೊಂಡು ಬನ್ನಿ', ಅತ್ತೆ ಕಾಫಿ ಕೊಟ್ಟು ಉಪಚರಿಸಿದಾಗ ಹೃದಯತುಂಬಿ ಬಂತು. ಬ್ರೋಕರ್ ತೋರಿಸಿದ ಮನೆಗಳಲ್ಲಿ ಒಂದು ಮನೆ ತುಂಬಾ ಇಷ್ಟವಾಗಿತ್ತು, ಆದರೆ ಈ ಮನೆಯ ಯಾವ ಕೋಣೆಯಲ್ಲೂ ಅಟ್ಟವೇ ಇಲ್ಲ. 'ಈ ಹಿಂದೆ ಇದ್ದವರು ಒಂದು ಮರದ ಬೀರು ಬಿಟ್ಟು ಹೋಗಿದ್ದಾರೆ. ಅದನ್ನು ಬಳಸಿಕೊಳ್ಳಬಹುದು, ಅಟ್ಟ ಇಲ್ಲದ ಮನೆ ಅಂತ ತುಂಬಾ ಜನ ಬೇಡ ಅಂತಿದ್ದಾರೆ, ಬಾಡಿಗೆ ಸ್ವಲ್ಪ ಕಮ್ಮಿ ಹೇಳ್ತಿರೋದು ಇದೇ ಕಾರಣಕ್ಕೆ... ರೆವೆನ್ಯೂ ಸೈಟಿನಲ್ಲಿ ಆ ಕಾಲಕ್ಕೆ ಜಾಗ ಭದ್ರ ಮಾಡ್ಕೊಳ್ಳೋಕೆ ಅಂತ ಕಟ್ಟಿಸಿರೋದು. ಈಗ ಇವಕ್ಕೆ ಚಿನ್ನದ ಬೆಲೆ' ಬ್ರೋಕರ್ ಮನೆಯ ವಿವರ ಕೊಟ್ಟ. ಒಂದು ರೂಮು, ಹಾಲು, ಅಡುಗೆ ಮನೆ... ಹಿತ್ತಲು ಅಲ್ಲೊಂದಿಷ್ಟು ಗಿಡಗಳು ಮನೆ ಮುಂದೆ ಸ್ವಲ್ಪ ಖಾಲಿ ಜಾಗ, ವಿಶಾಲವಾಗಿದೆ ಗಾಳಿ ಬೆಳಕು ಧಾರಾಳವಾಗಿದೆ. ನನಗೆ ಬೇಕಾದಷ್ಟು ಆದೀತು.




'ನನಗೆ ಒಪ್ಪಿಗೆ' ಎಂದು ತಿಳಿಸಿದೆ. 'ಅಟ್ಟ ಇಲ್ವಲ್ಲಕ್ಕ?' ತಂಗಿ ಮುಖ ಚಿಕ್ಕದು ಮಾಡಿದಳು. 'ಅಡ್ಡಿಯಿಲ್ಲ' ಎಂದೆ. ಹತ್ತೇ ನಿಮಿಷಕ್ಕೆ ಮನೆಯ ಮಾಲೀಕ ಬಂದು ಮನೆ ಅಡ್ವಾನ್ಸ್ ಬಾಡಿಗೆ ನಿಷ್ಕರ್ಷೆಯಾಗಿ 'ನಾಳೆ ಪೇಪರ್ ಮಾಡ್ಕೊಂಡು ಬರ್ತೀನಿ' ಎಂದ.

***

'ಸೌಮಿನಿ ನಿನ್ನ ಪಕ್ಕ ಮಲಕ್ಕೊಳ್ತಾಳೆ' ಎಂದು ಹಾಸಿಗೆ ಬಿಡಿಸುತ್ತ, 'ಅವಳಿಗೆ ಪಾಠ ಹೇಳ್ಕೊಡ್ತಿಯಾ? ಟ್ಯೂಷನ್‌ಗೆ ಹಾಕುವಷ್ಟು ಶಕ್ತಿಯಿಲ್ಲ, ನಿನ್ನಷ್ಟು ಬುದ್ಧಿವಂತೆ ನಾನಲ್ಲ' ತಂಗಿ ಕಣ್ಣೊರೆಸಿಕೊಂಡಿದ್ದಳು. 'ಅದೇನ್ ದೊಡ್ಡ ವಿಷಯ ಭಾಗೀ, ಆಯಿತು ಬಿಡು' ಎಂದೆ. 'ಥಾಂಕ್ಯೂ ದೊಡ್ಡಮ್ಮ' ಎಂದಳು ಅಲ್ಲೇ ಇದ್ದ ಸೌಮಿನಿ.

ಹೊಸ ಜೀವನದ ಮೊದಲ ದಿನ. ಹಳೆ ಊರು ಬಿಡಬೇಕು ಹೊಸ ಊರಿನಲ್ಲಿ ಬಿಡಾರ. ಆರ್ಥಿಕವಾಗಿ ಯಾರ ಬಳಿ ಕೈಯೊಡ್ಡಬೇಕಿಲ್ಲ. ಇರಲೊಂದು ಸೂರು, ತುತ್ತು ಊಟದ ವ್ಯವಸ್ಥೆಯಾಗಿದೆ. ಮಗ್ಗುಲು ತಿರುಗಿದೆ. ಹತ್ತನೆಯ ತರಗತಿಯಲ್ಲಿರುವ ಸೌಮಿನಿ ಆಗಲೇ ನಿದ್ರೆಗೆ ಜಾರಿದ್ದಳು. ಅದೆಷ್ಟು ಕನಸುಗಳನ್ನು ಕಟ್ಟಿಕೊಂಡಿರಬಹುದು?

'ಅಟ್ಟ ಇಲ್ಲದಿದ್ರೆ ಕಷ್ಟ ಅಲ್ವ? ಸಾಮಾನೆಲ್ಲ ಎಲ್ಲಿ ಹಾಕ್ಕೊಳ್ಳೋದು?' ತಂಗಿಯ ಅತ್ತೆ ಕೇಳಿದ್ದು ನೆನಪಾಯಿತು. ವಿಲೇವಾರಿ ಮಾಡೋದು ಎಷ್ಟು ಬೇಕೋ ಅಷ್ಟೇ ಇಟ್ಟುಕೊಂಡರಾಯ್ತು, ಹೇಗೂ ತುಂಬಿಸೋಕ್ಕೆ ಅಟ್ಟವಿದೆ ಅಂತ ಬೇಕಿದ್ದು ಬೇಡದ್ದು ಎಲ್ಲವನ್ನೂ ತುರುಕಿದ್ದೇ ಆಗಿತ್ತು. ಇವತ್ತಲ್ಲ ಇನ್ನೊಂದು ದಿನಕ್ಕೆ ಕೆಲಸಕ್ಕೆ ಬರಬಹುದು ಎಂಬ ದೂರಾಲೋಚನೆ. ವಾಸ್ತವದಲ್ಲಿ ಅದು ಹಾಗೆಂದೂ ಬಂದಿರಲೇ ಇಲ್ಲ. ಅವರಿವರು ಕೊಟ್ಟ ಉಪಯೋಗಿಸಲಾಗದ ಉಡುಗೊರೆಗಳು, ಪ್ಲಾಸ್ಟಿಕ್ ಡಬ್ಬಗಳು, ಭಾವನಾತ್ಮಕ ಬೆಸೆತವಿರುವ ಬಟ್ಟೆ ಬರೆ, ಕಾಗದಪತ್ರಗಳು ಆಹ್ವಾನಗಳು, ಅಮ್ಮ ಕೊಟ್ಟಿದ್ದ ಅಜ್ಜಿಯ ಕಾಲದ ಕೆಲವು ಹಳೆಯ ಪಾತ್ರೆಗಳು, ಮಣ್ಣಿನ ಬೊಂಬೆಗಳು, ತುಕ್ಕು ತಿನ್ನುತ್ತಿರುವ ಕಬ್ಬಿಣದ ಪೆಟ್ಟಿಗೆ, ಅವರ ಆಫೀಸಿನ ಡೈರಿ ಅರೆಬರೆ ತುಂಬಿದ್ದು, ಹೇಮುವಿನ ಪುಸ್ತಕಗಳು ಅಬ್ಬಬ್ಬಾ ತಲೆ ಚಿಟ್ಟು ಹಿಡಿಯಿತು. ಆರು ತಿಂಗಳಿಗೊಮ್ಮೆ ಅದನ್ನು ಇಳಿಸುವುದು, ದೂಳು ಹೊಡೆದು ಮತ್ತೆ ಅಟ್ಟ ಹತ್ತಿಸುವುದು ಇಷ್ಟೇ ಆಗಿತ್ತು. ಬಹುಶಃ ಈ ಬಾರಿ ಗಟ್ಟಿ ನಿರ್ಧಾರ ಮಾಡಿ ಅವುಗಳನ್ನು ವಿಲೇವಾರಿ ಮಾಡಬೇಕು. ದಿನಬಳಕೆಯ ವಸ್ತು ಹೊರಗಿದ್ದರೆ ಸಾಕು, ಅಟ್ಟವೇಕೆ? ಅಟ್ಟದಂತೆ ಮನಸ್ಸಿನ ಕಪಾಟುಗಳಲ್ಲೂ ತುಂಬಿರುವ ಬೇಡದ ನೆನಪುಗಳು ಯೋಚನೆ ತೆಗೆದು ಬಿಸುಡಬೇಕು. ಎಲ್ಲಕ್ಕೂ ಒಂದು ಕಾರಣವಿರುತ್ತದೆ. ಜೀವನವಿಡೀ ನಮ್ಮ ಸೋಲಿಗೆ, ಕೈಗೆಟುಕದಕ್ಕೆ ಯಾರನ್ನೋ ವ್ಯಥಾ ಶಪಿಸುತ್ತ, ಕಹಿಗಳನ್ನು ನೆನೆದು ಕೊರಗುತ್ತ ಬಳಲುವ ಬದಲು ಒಮ್ಮೆಗೇ ಒಗೆಯಬೇಕು.



ನಾಳೆ ಹೇಮು ಯಾವ ರೀತಿಯ ಜೀವನವನ್ನು ಬಯಸುತ್ತಾನೋ ಗೊತ್ತಿಲ್ಲ, ಅವನಿಗೆ ಅಡ್ಡಿಯಾಗುವುದಂತೂ ಬೇಡ. ಅವನಿಗೆ ಹೇಗೆ ಬೇಕೋ ಎಲ್ಲಿ ಬೇಕೋ ಇರಲಿ. ಶಿಫ್ಟ್ ಮಾಡುವ ಸಮಯಕ್ಕೆ ಭಾಗಿಯನ್ನು ನೆರವು ಕೋರಿದರೆ ನನಗೆ ಬೇಡವಾದ್ದು ಅಥವಾ ಹೆಚ್ಚಿಗೆ ಅನ್ನಿಸಿದ್ದು ಅವಳಿಗೆ ಬೇಕಾದ್ದು ತೆಗೆದುಕೊಳ್ಳಲಿ. ಹೇಮುವಿನ ಪುಸ್ತಕಗಳು ಸೌಮಿಗೆ ಉಪಯೋಗವಾಗುತ್ತೆ. ಉಳಿದದ್ದನ್ನೆಲ್ಲ ಅಲ್ಲೇ ಗುಜರಿಗೆ ಹಾಕಿ ಕೈತೊಳೆದುಕೊಳ್ಳಬೇಕು. ಅಟ್ಟದ ತಡೆಯಿಲ್ಲದೆ ಮನೆಯಿಡೀ ಪ್ರಕಾಶಮಯ... ಮನಸ್ಸಿಗೂ ಆಹ್ಲಾದ! ಸೌಮಿನಿಗೆ ಸಂಜೆ ಮನೆ ಪಾಠ ಕಲಿಸುವ ಹೊಸ ಬದ್ಧತೆ ಹೊಸ ಹುರುಪು ಕೊಟ್ಟಿರುವುದಂತೂ ನಿಜ. ಅವಳ ಭವಿಷ್ಯದ ಆಸೆಯಲ್ಲಿ ಭಾಗಿ, ತನ್ನ ಕಷ್ಟಗಳನ್ನು ಮರೆಯುತ್ತಿದ್ದಾಳೆ. ಇಂದ್ರಾಣಿ ಮೇಡಂ ಹೇಳಿದಂತೆ ಓದು ಮುಂದುವರೆಸಿ ಬಿ.ಕಾಮ್ ಪದವಿಗೆ ಓದಬೇಕು. ಈಗಿರುವ ಸ್ಥಾನದಿಂದ ಎತ್ತರಕ್ಕೆ ಬೆಳೆಯಬೇಕು... ಯೋಚನೆಯ ಸುಳಿಯಲ್ಲಿ ಯಾವಾಗಲೋ ನಿದ್ದೆ ಹತ್ತಿತ್ತು.

'ಇವತ್ತು ಹಬ್ಬ, ಹೊಸಲಿಗೆ ಎರಡೆಳೆ ಕೆಮ್ಮಣ್ಣು ಎಳೆದುಬಿಡು', ಭಾಗಿಯ ಅತ್ತೆ ಹೇಳುತ್ತಿದ್ದುದು ಕಿವಿಗೆ ಬಿದ್ದು, ಕೈಯುಜ್ಜಿ ಮುಖಕ್ಕೆ ಸವರಿಕೊಂಡು ಮೇಲೆದ್ದೆ. ಅಷ್ಟರಲ್ಲಾಗಲೇ ಬೆಳಕು ಹರಿದಿತ್ತು.

ಪ್ರತಿಕ್ರಿಯಿಸಿ: **feedback@sudha.co.in**